ಸೋರಿಕೆಯಾದ್ರೆ ಇಪ್ಪತ್ತು ಕಿಲೋಮೀಟರ್ ವ್ಯಾಪ್ತಿಯಲ್ಲಿ ಅತ್ಯಂತ ಅಪಾಯಕಾರಿ ಪರಿಸ್ಥಿತಿ ನಿರ್ಮಾಣವಾಗುತ್ತದಲ್ಲ?"

"ಅದು ನನಗೂ ಗೊತ್ತು ಜಿತೇಂದ್ರ. ನಾನು ನಿಮಗಿಂತ ಹಿರಿಯ ವಿಜ್ಞಾನಿ. ಇಪ್ಪತ್ತು ಕಿಲೋಮೀಟರ್ ವ್ಯಾಪ್ತಿಯಲ್ಲಿದ್ದವರನ್ನೆಲ್ಲ ಈಗಾಗ್ಲೇ ಖಾಲಿ ಮಾಡಿಸಿಯಾಗಿದೆ. ಕೊಡೆ ನೆನೆಯಬೇಕೇ ಹೊರತು, ಕೊಡೆಯ ನೆರಳಲ್ಲಿದ್ದವರು ನೆನೆಯಬಾರದು. ಈಗ ನಾನು ಕೊಡೆ ಇದ್ದಹಾಗೆ ಜಿತೇಂದ್ರ. ಸಮಾಧಿ ಮೇಲೆ ಬೆಳೆದ ಪುಷ್ಪೋದ್ಯಾನದಂತೆ ಜಪಾನ್ ಅಣು ಸ್ಫೋಟದ ಬಳಿಕ ಪ್ರಪಂಚವೇ ಬೆರಗಾಗುವಂತೆ ಚೇತರಿಸಿಕೊಂಡಿತು. ಈಗ ಮತ್ತೆ ಜಪಾನ್ ತೊಂದರೆಗೆ ಸಿಲುಕಿದೆ. ಸಾವಿರಾರು ಜನರು ಸಾಯ್ತಿದಾರೆ. ಈ ಸಮಯದಲ್ಲಿ ನಾವು ಮಾನವೀಯತೆಯನ್ನು ತೋರಿಸಬೇಕೇ ಹೊರತು, ಪ್ರಾಣಭಯದಿಂದ ಹೇಡಿಗಳಂತೆ ಬೆನ್ನು ತೋರಿಸುವುದಲ್ಲ..." ಮಾತು ನಿಲ್ಲಿಸಿ ನಕ್ಕ ಮೆಹತಾ ಮತ್ತೆ ಮಾತು ಮುಂದುವರೆಸಿದ.

"ದಟ್ ಇಸ್ ಗುಡ್ ಸ್ಪಿರಿಟ್... ನಿಮ್ಮ ಅಗತ್ಯ ಒದಗಿಬರಬಹುದು. ಸಿದ್ಧವಾಗಿರಿ" ಎನ್ನುತ್ತಾ ಕರೆಯನ್ನು ಕತ್ತರಿಸಿದ.

"ಮೆಹತಾ ಮಾತಿಗೆ ಅರ್ಥವೇನು ಜಿತೇಂದ್ರ? ಈ ಪರಿಸ್ಥಿತಿಯಲ್ಲಿ ಫುಕುಶಿಮಾಗೆ ಹೇಗೆ ಹೋಗ್ತೀವಿ?" ಆಶ್ಚರ್ಯದಿಂದ ಕೇಳಿದಳು ಶ್ಯಾಮಲಾ.

